ಮೂಲ ದಾವಾ ನಂಃ 306/2014
ಪಿ.ಡಬ್ಲ್ಯೂ-1

**ದಿಃ 06/01/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ವಿ.ಎಮ್.ಎನ್. ವಕೀಲರಿಂದ ಪ್ರತಿವಾದಿಯ ಪರವಾಗಿ.**

ನನ್ನ ದಾವೆಯಲ್ಲಿ 1 ಎಕರೆ 2 ಗುಂಟೆ ಜಮೀನು ಕೆನಲಗಾಗಿ ಹೋಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ನಾನು ಚಿಕ್ಕವಳಿದ್ದಾಗ ಸದರಿ ಪರಿಹಾರದ ಹಣವನ್ನು ನನ್ನ ತಂದೆ ಪಡೆದಿದ್ದಾರೆ. ಸದರಿ ಹಣ ಪಡೆಯುವಾಗ ನನ್ನ ತಂದೆ ಸರಾಯಿ ಕುಡಿಯುತ್ತಿದ್ದ. ಆ ಹಣ ಪಡೆದುಕೊಂಡಾ ನಾನಾಗಲಿ, ನನ್ನ ತಾಯಿಯಾಗಲಿ ಯಾವುದೇ ತಕರಾರು ಮಾಡಿಲ್ಲ ಎಂದರೆ ನಾನು ಚಿಕ್ಕವಳು ಇದ್ದೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ವಯಸ್ಕಾಳದ ನಂತರ ನನ್ನ ತಂದೆಗೆ ಈ ಬಗ್ಗೆ ನಾನು ಕೇಳಿಲ್ಲ. ಸದರಿ ಪರಿಹಾರದ ಹಣದಲ್ಲೂ ಸಹ ನನಗೆ ಪಾಲು ಬರಬೇಕು. ಸದರಿ ಕೆನಲ ಪರಿಹಾರಕ್ಕೆ ಸಂಬಂದಪಟ್ಟಂತೆ ನಾನು ನನ್ನ ದಾವೆಯಲ್ಲಿ ಪಾಲು ಬೇಕೆಂದು ಕೇಳಿಲ್ಲ. ಸದರಿ ಜಮೀನು ಮಸಾರಿ ಜಮೀನು. ಸದರಿ ಜಮೀನು ಒಣಬೇಸಾಯಿ ಜಮೀನು ಎಂದರೆ ಸರಿಯಲ್ಲ, ನೀರಾವರಿ ಜಮೀನು ಇರುತ್ತದೆ. ಕೆನಲ ಬಂದ ನಂತರ ನೀರಾವರಿ ಜಮೀನು ಆಗಿದೆ. ನಾವು ಚಿಕ್ಕವರಿದ್ದಾಗಲೆ ಕೆನಲ ಬಂದಿದೆ. ನಮ್ಮ ಹೊಲಕ್ಕೆ ಕೆನಲ ನೀರು ಬರುತ್ತದೆ. ನಮ್ಮ ಹೊಲಕ್ಕೆ ಕೆನಲ ನೀರು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಉತಾರೆಯಲ್ಲಿ ಸದರಿ ಜಮೀನನ್ನು ನೀರಾವರಿ ಜಮೀನು ಎಂದು ಬರೆದಿಲ್ಲ ಎಂದರೆ ಗೊತ್ತಿಲ್ಲ. ನಾನು ಸದರಿ ಜಮೀನನ್ನು ಬಿತ್ತುವುದು, ಬೆಳೆಯುವುದು ಮದುವೆಗಿಂತ ಮುಂಚೆ ಮಾಡಿರುತ್ತೇನೆ. ಮದುವೆಯ ಕಾಲಕ್ಕೆ ನನಗೆ 10-12 ವರ್ಷ ವಯಸ್ಸಾಗಿತ್ತು. ಸದರಿ ಹೊಲವನ್ನು ಸಾಗುವಳಿ ಮಾಡುವ ಪ್ರಶ್ನೇ ಬಂದಿಲ್ಲ ಅದರ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನಾಗಲಿ ನನ್ನ ಸಹೋದರಿಯರಾಗಲಿ, ನನ್ನ ಸಹೋರರಾಗಲಿ ಸದರಿ ಜಮೀನ್ನು ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಸದರಿ ಜಮೀನಿನಂದ ನಮ್ಮ ತಂದೆ ತಾಯಿಗೆ ಯಾವುದೇ ಉತ್ಪನ್ನ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಗುವಳಿ ಮಾಡುವಾಗ ಶೇಂಗಾ ಮತ್ತು ತೊಗರಿ ಬೆಳೆಯುತ್ತಿದ್ದೇವು 100 ಚೀಲದವರೆಗೆ ಶೇಂಗಾ ಬೆಳೆಯುತ್ತಿದ್ದೇವು. ಸದರಿ ಜಮೀನು 3 ಎಕರೆಗಿಂತ ಕಡಿಮೆ ಇದೆ. 1 ಎಕರೆ 35 ಚೀಲ ಶೆಂಗಾ ಬರುತ್ತದೆ. 1 ಎಕರೆಗೆ 5-6 ಚೀಲ ತೊಗರಿ ಬರುತ್ತದೆ. ಎಕರೆ ಒಂದಕ್ಕೆ 5-6 ಚೀಲರ ಬರುತ್ತದೆ ಎಂದರೆ ಸರಿಯಲ್ಲ. ಎಕರೆ ಒಂದಕ್ಕೆ 2-3 ಚೀಲ ತೊಗರಿ ಬರುತ್ತದೆ ಎಂದರೆ ಸರಿಯಲ್ಲ. ಬಂದ ಬೆಳೆಯನ್ನು ಮಾರಿದರೆ ಎಷ್ಟು ಹಣ ಬರುತ್ತಿತ್ತು ಎಂದರೆ ನಮ್ಮ ತಂದೆ ಮಾರುತ್ತಿದ್ದರು ನಮಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಒಂದ ವರ್ಷಕ್ಕೆ ನಮ್ಮ ಕುಟುಂಬದ ಆದಾಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.  ಕುಟುಂಬದ ವಾರ್ಷಿಕ ಖರ್ಚು ಎಷ್ಟು ಸಹ ಎಂದು ನನಗೆ ಗೊತ್ತಿಲ್ಲ.

ಈ ಹೊಲದ ಉತ್ಪನ್ನ ಸಾಲದೇ ಇರುವ ಕಾರಣ ನನ್ನ ತಂದೆ ತಾಯಿ ದಾವಾ ಸ್ವತ್ತನ್ನು 3 ನೇ ಪ್ರತಿವಾದಿಗೆ ಮಾರಿರುತ್ತಾರೆ ಎಂದರೆ ಸರಿಯಲ್ಲ.  ನಮ್ಮ ತಂದೆ ಸದರಿ ಹಣವನ್ನು ಪಡೆದು ತನ್ನ ಕುಟುಂಬದ ನಿರ್ವಹಣೆಗೆ ಬಳಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆ ಸದರಿ ಜಮೀನ್ನನು 2007 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ ನನ್ನ ತಾಯಿ ಮಾರಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಸಹ ಅದಕ್ಕೆ ಸಹಿ ಮಾಡಿರುತ್ತಾರೆ ಎಂದರೆ ರೇಷನ ಕಾರ್ಡ ಮಾಡಿಸುತ್ತೇನೆ ಎಂದು ಸಹಿ ಮಾಡಿಸಿಕೊಂಡಿರುತ್ತಾನೆ ಎಂದು ಸಾಕ್ಷಿ ನುಡಿಯುತ್ತಾರೆ. ರೇಷನ ಕಾರ್ಡ ಮಾಡಿಸಿಕೊಳ್ಳಲು ಸಹಿ ಮಾಡಿಸಿಕೊಂಡಿರುತ್ತಾನೆ ಎಂದು ನನ್ನ ತಾಯಿ ನನಗೆ ಹೇಳಿದಳು. ರೇಷನ ಕಾರ್ಡಿಗಾಗಿ ಸಹಿ ಮಾಡಿಸಿಕೊಂಡಿರುವ ಬಗ್ಗೆ ನನಗೆ ಈಗ ಗೊತ್ತಾಗಿದೆ. ನನ್ನ ತಂದೆ ಸರಾಯಿ ಕುಡಿಯುವ ಚಟವಾಗಲಿ, ಇಸ್ಪೇಟ ಆಡುವ ಚಟವಾಗಲಿ ಬೇರೆ ಯಾವ ಚಟ ಇರುವುದಿಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ತನ್ನ ಹೊಲ ಮಾರಾಟ ಮಾಡುತ್ತಿದ್ದ ನನ್ನ ತಂದೆಯೇ ಮದ್ಯಸ್ಥಗಾರನಾಗಿ ಸದರಿ ಹೊಲವನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಕ್ರಯಪತ್ರಕ್ಕೆ ನನ್ನ ತಂದೆ ಸಾಕ್ಷಿಯಾಗಿ ಸಹಿ ಮಾಡಿದ್ದಾನೆ ಎಂದರೆ ಆತ ಕುಡಿದು ಮಾಡಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. 2008 ರಿಂದ 4 ನೇ ಪ್ರತಿವಾದಿಯೆ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದು ಅವರೆ ಬಿತ್ತುವುದು, ಬೆಳೆಯುವದು ಮಾಡುತ್ತಾರೆ ಎಂದರೆ ಸರಿ.

ನಂತರ 4 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಕೂಡಿ ದಾವಾ ಸ್ವತ್ತಿನಲ್ಲಿ ಎರಡು ಕೊಣೆ ಕಟ್ಟಿಸಿರುತ್ತಾರೆ ಎಂದರೆ ನಾವು ಕಟ್ಟಿಸಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕೊಣೆಗಳನ್ನು ನಾನು ಚಿಕ್ಕವಳಿದ್ದಾಗ ನನ್ನ ಮಾವನವರು ಕಟ್ಟಿಸಿರುತ್ತಾರೆ. ನನ್ನ ತಾಯಿ ಅಣ್ಣನಾದ ಬಾಬು ಸುಭಾಸ ರಾಠೋಡರವರು ಕಟ್ಟಿಸಿರುತ್ತಾರೆ. ಅವರು ಜೀವಂತ ಇದ್ದಾರೆ. 4 ನೇ ಪ್ರತಿವಾದಿ ಖರಿದಿಸುವಾಗ 1 ಎಕರೆ ಮಾತ್ರ ಸಾಗುವಳಿ ಜಮೀನಾಗಿತ್ತು ಉಳಿದ ಜಮೀನು ಸಾಗುವಳಿ ಮಾಡಲು ಸಾಧ್ಯವಾಗದ ಬಂಡೆಗಳಿಂದ ಕೂಡಿರುವ ಜಮೀನು ಆಗಿತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮತ್ತು ಆಕೆಯ ಗಂಡ ವರ್ಷ ವರ್ಷ ಸ್ವಲ್ಪ ಬಂಡೆಗಳನ್ನು ತೆಗೆಸಿ ಈಗ ಸಾಗುವಳಿ ಜಮೀನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಂಡೆಗಳನ್ನು ತೆಗೆದು ಹೊಲದ ಸುತ್ತಮುತ್ತ ಒಡ್ಡುಗಳನ್ನು ನಿರ್ಮಿಸಿದ್ದಾರೆ ಎಂದರೆ ಅದು ಮೊದಲಿನಿಂದಲೂ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಚಿಕ್ಕವಳಿದ್ದಾಗಿನಿಂದಲೂ ಇದೆ ಯಾರು ಕಟ್ಟಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೊದಲಿನಿಂದಲೂ ಅದು ಕಲ್ಲಿನ ಒಡ್ಡು ಇದೆ, ಅಲ್ಲಿ ಈಗ ಕಲ್ಲಿನ ಒಡ್ಡು ಇಲ್ಲ ಈಗ ಕಪೌಂಡ ಇದೆ ಎಂದರೆ ಸರಿಯಲ್ಲ. ಕಲ್ಲಿನ ಒಡ್ಡನ್ನು ತೆಗೆಸಿ ಅಲ್ಲಿ ಈಗ ಬೋರವೆಲ್ಲ ಹಾಕಿಸಿದ್ದಾರೆ ಎಂದರೆ ಮೊದಲಿನಿಂದಲೂ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಅದನ್ನು ನಾವು ಸಣ್ಣವರಿದ್ದಾಗ ಹಾಕಿಸಿದ್ದು ಯಾರು ಹಾಕಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬೋರವೆಲ ನೀರನ್ನು ಕರೆಂಟ ಮೂಲಕ ಪಡೆಯುತಿದ್ದೇವು. ಕರೆಂಟ ಮೋಟರ ಕೂಡಿಸುವಾಗ ಕೆಇಬಿಯಿಂದ ಪರವಾನಿಗೆ ಪಡೆಯಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಬಳಿ ಕೆಇಬಿಯಿಂದ ಪಡೆದ ಪರವಾನಿಗೆ ಪತ್ರ ಇರುವ ಬಗ್ಗೆ ನನಗೆ ಗೊತ್ತಿಲ್ಲ.

4 ನೇ ಪ್ರತಿವಾದಿ ಕೆಇಬಿಯಿಂದ ಪರವಾನಿಗೆ ಪಡೆದು ಮೊಟರ ಅಳವಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಂಡೆಗಳನ್ನು ತೆಗೆಯಲು, ಕಪೌಂಡ ನಿರ್ಮಿಸಲು ಬೋರವೆಲ ಹಾಕಿಸಲು, ಕರೆಂಟ ಮೋಟರ ಅಳವಡಿಸಲು 4 ನೇ ಪ್ರತಿವಾದಿ ಒಟ್ಟು ರೂ.10,50,000/-ಗಳನ್ನು ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆಲ್ಲ ನಾವೆ ಖರ್ಚು ಮಾಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಕುಡಿಯುತ್ತಿದ್ದ, ಇಸ್ಪೇಟ ಆಡುತ್ತಿದ್ದ ಮತ್ತು ಇತರೆ ಚಟ ಹೊಂದಿದ್ದ ಆತ ದುಡಿಯುತ್ತಿರಲಿಲ್ಲ ಎಂದು ನಾನು ಹೇಳಿದ್ದು ಹಾಗಾಗಿ ಆತನಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಆತ ದುಡಿಯುತ್ತಿರಲಿಲ್ಲ ಎಂದಾದರೆ ಸಂಸಾರ ಖರ್ಚು ಯಾರು

ನಿರ್ವಹಿಸುತ್ತಿದ್ದರು ಎಂದರೆ ನನ್ನ ತಾಯಿ ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಆಕೆಯ ಹೊಲದಲ್ಲಿ ಕೆಲಸ ಮಾಡಿ ಖರ್ಚು ನಿರ್ವಹಿಸುತ್ತಿದ್ದರು.

ನನ್ನ ತಾಯಿಗೂ ನನಗೂ ಈಗ ಸಂಬಂದ ಚೆನ್ನಾಗಿ ಇಲ್ಲ. ನನ್ನ ತಾಯಿಗೂ ಮತ್ತು ನನಗೆ ಸಂಬಂದ ಸರಿ ಇಲ್ಲದೇ ಈಗ 8 ವರ್ಷಗಳಾಯಿತು. ಈ ಜಮೀನಿನ ವಿಷಯಕ್ಕೆ ಸಂಬಂದಪಟ್ಟಂತೆ ಸಂಬಂದ ಕೆಟ್ಟಿದೆ. ಜಮೀನನ್ನು ಮಾರಾಟ ಮಾಡಿದ ನಂತರ ಸಂಬಂದ ಕೆಟ್ಟಿದೆ. 4 ನೇ ಪ್ರತಿವಾದಿ ಹೊಲವನ್ನು ಪಡೆದ ನಂತರ ನಮಗೆ ಮಾರಾಟ ಮಾಡಿವು ವಿಷಯ ತಿಳಿಯಿತು. ನನ್ನ ತಂದೆ ತಾಯಿ ಸಂಸಾರದ ಅಡಚಣೆಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಈಗ ಫಲವತ್ತಾದ ಜಮೀನು ಮಾಡಿದ ನಂತರ ನನ್ನ ತಂದೆ ದುರಾಸೆಗೆ ಬಿದ್ದು ನನ್ನ ಮೂಲಕ ಈ ದಾವೆ ಹೂಡಿಸಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆ ಹೂಡುವ ಮುಂಚೆ ಈ ದಾವಾ ವಿಷಯಕ್ಕೆ ಸಂಬಂದಪಟ್ಟಂತೆ ಇನ್ನೊಂದು ದಾವೆ ಹೂಡಿದ್ದೇವು ಎಂದರೆ ಸರಿ. ಈ ಮೊದಲಿನ ದಾವೆಯ ವಿಷಯ ಮತ್ತು ಈ ದಾವೆಯ ವಿಷಯ ಎರಡು ಒಂದೆ ಇದೆ ಎಂದರೆ ಸರಿ. ಮೊದಲಿನ ದಾವೆ ಚಾಲ್ತಿ ಇರುವಾಗಲೆ ಈ ದಾವೆ ಹೂಡಿದ್ದೇವೆ ಎಂದರೆ ಸರಿ. ಈ ದಾವೆ ಹೂಡಿದ ನಂತರ ಮೊದಲಿನ ದಾವೆಯನ್ನು ಹಿಂಪಡೆದಿದ್ದೇವೆ ಎಂದರೆ ಸರಿ. ಈ ದಾವೆ ಹೂಡಲು ನಾನು ಮಾಹಿತಿ ನೀಡಿರುತ್ತೇವೆ. ನಾವು 5 ಜನ ಕೂಡಿ ವಕೀಲರ ಬಳಿ ಹೋಗಿದ್ದೇವು. ಈ ದಾವೆಯನ್ನು ನಾನು ಹೇಳಿ ಬರೆಸಿಲ್ಲ ನನ್ನ ತಂದೆ ಹೇಳಿ ಬರೆಸಿದ್ದಾನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದದ ದಾವಾ ಸ್ವತ್ತನ್ನು ಹೇಗಾದರೂ ಮಾಡಿ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಿನಾಕಾರಣ 4 ನೇ ಪ್ರತಿವಾದಿಯ ಮೇಲೆ ದಾವೆ ಹೂಡಿದ್ದರಿಂದ ಅವರಿಗೆ 25 ಸಾವಿರಗಳ ಪರಿಹಾರ ಕೊಡಬೇಕೆಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪೂರ್ವಕ್ಕೆ ಅಣ್ಣಾಜಿ ರಾಠೋಡರವರ ಜಮೀನು, ಪಶ್ಚಿಮಕ್ಕೆ ದಾಮರಿ ಕೇಶು ರಾಠೋಡರವರ ಜಮೀನು, ದಕ್ಷಿಣಕ್ಕೆ ಬಾಬು ಲಾಲಪ್ಪ ಚವ್ಹಾಣರವರ ಜಮೀನು, ಉತ್ತರಕ್ಕೆ ಖೇಮುರವರ ಜಮೀನು ಇದೆ. ನಾನು ಜಮೀನನ್ನು ನೋಡಿಲ್ಲ ನಾನು ಹೇಳುತ್ತಿರುವ ಚಕ್ಕುಬಂದಿ ಸರಿ ಇಲ್ಲ ಎಂದರೆ ಸುಳ್ಳು. ಹೊಲದ ಮಧ್ಯದಲ್ಲಿ ಕೆನಲ ಹಾಯಿದು ಹೋಗಿದೆ. ಹೊಲದ ಮಧ್ಯದಲ್ಲಿ ಕೆನಲ್ ಹಾಯಿದು ಹೋಗಿಲ್ಲ ಪೂರ್ವದ ಕಡೆ ಹಾಯಿದು ಹೋಗಿದೆ ಎಂದರೆ

ಸರಿಯಲ್ಲ. ನನ್ನ ತಾಯಿಯ ಅಣ್ಣ ಬಾಬು ರವರಿಗೆ 25 ಎಕರೆ ಜಮೀನು ಇದೆ. ಬಾಗೇವಾಡಿಯಲ್ಲಿ ಇದೆ. ಆತನಿಗೆ ಎಷ್ಟು ಉತ್ಪನ್ನ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆಗೆ, ನನ್ನ ತಮ್ಮಂದಿರ ಶಾಲೆಗೆ ಮತ್ತು ಹೊಲಕ್ಕೆ ನನ್ನ ಮಾವನೆ ಖರ್ಚು ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ. ಓ ಹೇ ಕೇ ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.